# ೧ ಹೆಸರಿನಲ್ಲಿ ಏನಿದೆ?

0333CH01



ಬಹಳ ಬಹಳ ವರ್ಷಗಳ ಹಿಂದೆ, ತಾರಕೇಶ್ವರದಲ್ಲಿ ಒಂದು ದನಗಾಹಿ ಕುಟುಂಬವಿತ್ತು. ಪ್ರತಿದಿನ ದೇಬಾ ಮತ್ತು ದೀಪ್ ಹಸುಗಳನ್ನು ಮೇಯಿಸಲು ಹೊರಗೆ ಕರೆದೊಯ್ಯುತ್ತಿದ್ದರು. ಅವರು ಎಲ್ಲಾ ಹಸುಗಳೊಂದಿಗೆ ಸಂಜೆ ತಡವಾಗಿ ಹಿಂತಿರುಗುತ್ತಿದ್ದರು.


ಒಂದು ದಿನ, ದೇಬಾ ಕೇಳಿದಳು: ನಾವು ಯಾವುದೇ ಹಸುಗಳನ್ನು ಕಳೆದುಕೊಂಡಿಲ್ಲ ಎಂದು ನಮಗೆ ಹೇಗೆ ತಿಳಿಯುತ್ತದೆ? ಅವರಿಗೆ ಎಣಿಸುವುದು ಹೇಗೆಂದು ತಿಳಿದಿರಲಿಲ್ಲ.



**ದೇಬಾ ಮತ್ತು ದೀಪ್ ಏನು ಮಾಡಬಹುದು?**


ಅವರ ಸ್ನೇಹಿತನು ಅವರಿಗೆ ಒಂದು ಉಪಾಯವನ್ನು ನೀಡಿದನು ನೀವು ಹೊರಗೆ ಹೋಗುವಾಗ, ಬಾಗಿಲನ್ನು ದಾಟಿ ಹೋಗುವ ಪ್ರತಿ ಹಸುವಿಗಾಗಿ ಗೋಡೆಯ ಮೇಲೆ ಒಂದು ಗುರುತು ಹಾಕಿ. ನಂತರ ನೀವು ಹಿಂತಿರುಗಿದಾಗ, ಪ್ರತಿ ಬಾರಿ ಹಸುವು ಬಾಗಿಲನ್ನು ಮತ್ತೆ ಮರು -ಪ್ರವೇಶಿಸಿದಾಗ ಗೋಡೆಯಿಂದ ಒಂದು ಗುರುತನ್ನು ತೆಗೆದು ಹಾಕಿ.

ಮರುದಿನ ಅವರು ತಮ್ಮ ಸ್ನೇಹಿತನ ಆಲೋಚನೆಯನ್ನು ಅನುಸರಿಸಿದರು, ಮತ್ತು ಅವರು ಮನೆಗೆ ಹಿಂದಿರುಗಿದಾಗ ಎಲ್ಲಾ ಗುರುತುಗಳು ಅಳಿಸಿ ಹಾಕಿದರು.



**ಎಲ್ಲಾ ದನಗಳು ಮನೆಗೆ ಮರಳಿ ಬಂದಿವೆಯೇ?**

ಕೆಲವು ವರ್ಷಗಳ ನಂತರ, ಅವರು ಇನ್ನೂ ಅನೇಕ ಹಸುಗಳನ್ನು ಹೊಂದಿದ್ದರು. ಒಂದು ದಿನ, ಅವರು ಮನೆಯಿಂದ ಹೊರಟಾಗ ಅವರ ಗೋಡೆಯಲ್ಲಿ ಅನೇಕ ಗುರುತುಗಳು ಇದ್ದವು.



ಒಟ್ಟು, ಅವರು .......... ಹಸುಗಳು ಹೊಂದಿದ್ದರು.

ಮರುದಿನ ಅವರು ಹಸುಗಳೊಂದಿಗೆ ಮರಳಿದರು. ಪ್ರತಿ ಹಸು ಮತ್ತೆ ಬಾಗಿಲನ್ನು ಮರು-ಪ್ರವೇಶಿಸುತ್ತಿದ್ದಂತೆ ಅವರು ಒಂದು ಗುರುತನ್ನು ಅಳಿಸಿ ಹಾಕುತ್ತಿದ್ದರು. ಗೋಡೆಯ ಮೇಲೆ ಇನ್ನೂ ಎರಡು ಗುರುತುಗಳು ಹಾಗೆಯೇ ಉಳಿದಿದ್ದವು, ಆದರೆ ಹೊರಗೆ ಅವರಿಗೆ ಯಾವುದೇ ಹಸುಗಳು ಕಾಣಿಸಲಿಲ್ಲ. ಇದರಿಂದ ಅವರು ಚಿಂತಿತರಾಗಿದ್ದರು.

**ದೇಬಾ ಮತ್ತು ದೀಪ್ ಏಕೆ ಚಿಂತಿತರಾಗಿದ್ದರು?**

ಎಷ್ಟು ಹಸುಗಳು ಮನೆಗೆ ತಲುಪಿದ್ದವು? ................................

ದೇಬಾ ಮತ್ತು ದೀಪ್ ಬೇಗನೆ ಕಾಣೆಯಾದ ಹಸುಗಳನ್ನು ಹುಡುಕಲು ಹೋದರು ಮತ್ತು ಅವುಗಳನ್ನು ಹತ್ತಿರದ ಹೊಲದಲ್ಲಿ ಕಂಡುಕೊಂಡರು. ಅವರೆಲ್ಲರೂ ಸಂತೋಷದಿಂದ ಒಟ್ಟಿಗೆ ಮನೆಗೆ ಮರಳಿದರು!

ಅವರ ಸ್ನೇಹಿತ ಹೇಮಂತ್ ಬಳಿ ೩೬ ಹಸುಗಳು ಮತ್ತು ೨೩ ಕುರಿಗಳಿದ್ದವು.

ದೇಬಾ ಮತ್ತು ದೀಪ್‌ರಂತೆ ಗುರುತುಗಳನ್ನು ಮಾಡುವ ಮೂಲಕ ಹೇಮಂತ್‌ಗೆ ತನ್ನ ಹಸುಗಳು ಮತ್ತು ಕುರಿಗಳ ಮೇಲೆ ನಿಗಾ ಇಡಲು ಸಹಾಯ ಮಾಡಿ.



**ಶಿಕ್ಷಕರಿಗೆ ಟಿಪ್ಪಣಿ**: ಸಂಖ್ಯೆಗಳನ್ನು ಬಳಸದೆ ವಸ್ತುಗಳ ದೊಡ್ಡ ಗುಂಪುಗಳನ್ನು ಎಣಿಸಲು ವಿವಿಧ ತಂತ್ರಗಳ ಬಗ್ಗೆ ಯೋಚಿಸಲು ಮಕ್ಕಳನ್ನು ಪ್ರೋತ್ಸಾಹಿಸಿ. ಅವರು ಮೇಲಿನ ಕಥೆಯನ್ನು, ತರಗತಿಯೊಳಗೆ ಪ್ರವೇಶಿಸುವ ಮತ್ತು ಹೊರಹೋಗುವ ಎಲ್ಲಾ ಮಕ್ಕಳ ಮೇಲೆ ನಿಗಾ ಇಡಲು ಒಂದು ಚಟುವಟಿಕೆಯಾಗಿ ಬಳಸಬಹುದು.

© NCERT not to be republished

## ನಾವು ಮಾಡೋಣ

೧. ಕೆಲವು ಪ್ರಾಣಿಗಳು ಮತ್ತು ಪಕ್ಷಿಗಳು ಆಟವಾಡಲು ಒಗ್ಗೂಡಿದವು. ಅವು ೨ ತಂಡಗಳನ್ನು ರಚಿಸಲು ಬಯಸಿದ್ದವು. ಮೊದಲ ತಂಡದ ನಾಯಕನು ಅತಿ ಉದ್ದದ ಹೆಸರು, ಅಂದರೆ, ಅತಿ ಹೆಚ್ಚು ಅಕ್ಷರಗಳನ್ನು ಹೊಂದಿರುವವನಾಗಿರಬೇಕು, ಎರಡನೇ ತಂಡದ ನಾಯಕನು ಚಿಕ್ಕ ಹೆಸರನ್ನು ಹೊಂದಿರುವವನು, ಅಂದರೆ, ಕಡಿಮೆ ಅಕ್ಷರಗಳನ್ನು ಹೊಂದಿರುವವನು ಆಗಿರುತ್ತಾನೆ ಎಂದು ಅವರು ನಿರ್ಧರಿಸಿದರು.




೨ ತಂಡಗಳ ನಾಯಕರನ್ನು ಕಂಡುಹಿಡಿಯಿರಿ.

| | |
|---|---|
| ಮೊದಲ ತಂಡ : | |
| ಅಕ್ಷರ ಎಣಿಕೆ : | |
| ಎರಡನೇ ತಂಡ : | |
| ಅಕ್ಷರ ಎಣಿಕೆ : | |

ಮೊದಲ ತಂಡದ ನಾಯಕನಿಗಿಂತ ಉದ್ದವಾದ ಹೆಸರನ್ನು ಹೊಂದಿರುವ ಯಾವುದೇ ಪ್ರಾಣಿ ನಿಮಗೆ ಗೊತ್ತಿದ್ದಿಯೇ?

೨. ಯಾರಿಗೆ ಉದ್ದವಾದ ಹೆಸರು ಇದೆ? ಚರ್ಚಿಸಿ.




ಮ ಹೇ ಶ್

ಕಾ ರ್ತಿ ಕ್

© NCERT not to be republished

೩. ಕೆಳಗೆ ಕೊಟ್ಟಿರುವ ಜಾಗಗಳಲ್ಲಿ ನಿಮ್ಮ ಕೆಲವು ಸ್ನೇಹಿತರ ಹೆಸರುಗಳನ್ನು ಬರೆಯಿರಿ ಮತ್ತು ನಂತರ ಅ ದಿಂದ ಊ ವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ.

.............................................. ◯

.............................................. ◯ .............................................. ◯

.............................................. ◯ .............................................. ◯

.............................................. ◯ .............................................. ◯

.............................................. ◯

ಅ. ಅತಿ ಉದ್ದದ ಹೆಸರು(ಗಳಿಗೆ) ✓ ಗುರುತು ಮಾಡಿ ಮತ್ತು ಅತ್ಯಂತ ಚಿಕ್ಕ ಹೆಸರು (ಗಳಿಗೆ) ಕ್ರಾಸ್ × ಹಾಕಿ.

ಆ. ನಿಮ್ಮ ಹೆಸರಿನ ಆರಂಭಿಕ ಅಕ್ಷರವನ್ನು ಬರೆಯಿರಿ. ..........................................

ಇ. ನಿಮ್ಮಂತೆಯೇ ಆರಂಭಿಕ ಅಕ್ಷರವನ್ನು ಹೊಂದಿರುವ ಎಲ್ಲಾ ಹೆಸರು (ಗಳನ್ನು) ಎಣಿಸಿ.

ಈ. ಯಾವ ಆರಂಭದ ಅಕ್ಷರವನ್ನು ಹೆಚ್ಚು ಬಳಸಲಾಗುತ್ತದೆ? ಅದರೊಂದಿಗೆ ಪ್ರಾರಂಭವಾಗುವ ಹೆಸರುಗಳನ್ನು ಎಣಿಸಿ.

ಉ. ಅದೇ ಅಕ್ಷರದೊಂದಿಗೆ ಕೊನೆಯಾಗುವ ಹೆಸರುಗಳನ್ನು ಎಣಿಸಿ.

..........................................................................................................

ಊ. ಯಾವುದೇ ಹೆಸರಿನ ಆರಂಭದಲ್ಲಿ ಬಳಕೆಯಾಗದ ಅಕ್ಷರಗಳನ್ನು ಬರೆಯಿರಿ.

..........................................................................................................



**ಶಿಕ್ಷಕರಿಗೆ ಟಿಪ್ಪಣಿ:** ಶಿಕ್ಷಕರು ಹುಡುಗರು ಮತ್ತು ಹುಡುಗಿಯರಲ್ಲಿ ಒಟ್ಟಾರೆ ತರಗತಿಯಲ್ಲಿ ಚಿಕ್ಕ ಮತ್ತು ಉದ್ದವಾದ ಹೆಸರುಗಳನ್ನು ಗುರುತಿಸುವಂತೆ ಮಕ್ಕಳಿಗೆ ಹೇಳಬಹುದು. ತರಗತಿಯಲ್ಲಿ ಚರ್ಚೆಯ ಮೂಲಕ ತಮ್ಮ ಕಾರ್ಯತಂತ್ರವನ್ನು ಹಂಚಿಕೊಳ್ಳಲು ಅವರಿಗೆ ಸಹಾಯ ಮಾಡಿ.

© NCERT not to be republished

೪. ತೇಜಿ ಮತ್ತು ಜೋಜೋ ಈ ಕಾರ್ಡುಗಳನ್ನು ಬಳಸಿಕೊಂಡು ಸಂಖ್ಯೆಗಳನ್ನು ತಯಾರಿಸುತ್ತಿದ್ದಾರೆ.

ಒಂದು ಎರಡು ಮೂರು
ನಾಲ್ಕು ಐದು ಆರು
ಏಳು ಎಂಟು ಒಂಬತ್ತು

ಹತ್ತು ಹನ್ನೊಂದು ಹನ್ನೆರಡು ಹದಿಮೂರು
ಹದಿನಾಲ್ಕು ಹದಿನೈದು ಹದಿನಾರು
ಹದಿನೇಳು ಹದಿನೆಂಟು ಹತ್ತೊಂಬತ್ತು

ಇಪ್ಪತ್ತು ಮೂವತ್ತು ನಲವತ್ತು ಐವತ್ತು ಅರವತ್ತು ಎಪ್ಪತ್ತು ಎಂಭತ್ತು ತೊಂಬತ್ತು



ತೇಜಿ ತನ್ನ ರೋಲ್ ಸಂಖ್ಯೆ ೪೩ ಅನ್ನು ಈ ರೀತಿ ಮಾಡುತ್ತಾಳೆ. ಆ ಸಂಖ್ಯೆಯ ಹೆಸರು ೧೦ ಅಕ್ಷರಗಳನ್ನು ಹೊಂದಿದೆ.

ನಲವತ್ತು ಮೂರು

ಜೋಜೋ ತನ್ನ ರೋಲ್ ಸಂಖ್ಯೆ ೧೭ ಅನ್ನು ಈ ರೀತಿ ಮಾಡುತ್ತಾನೆ. ಆ ಸಂಖ್ಯೆಯ ಹೆಸರು............ ಅಕ್ಷರಗಳನ್ನು ಹೊಂದಿದೆ.

ಹದಿನೇಳು



ಅ. ಮೇಲೆ ತೋರಿಸಿರುವಂತೆ ಸಂಖ್ಯೆ ಕಾರ್ಡ್‌ಗಳನ್ನು ಬಳಸಿಕೊಂಡು ನಿಮ್ಮ ರೋಲ್ ಸಂಖ್ಯೆಯನ್ನು ಬರೆಯಿರಿ. ಸಂಖ್ಯೆ ಕಾರ್ಡ್‌ಗಳನ್ನು ಪುಸ್ತಕದ ಕೊನೆಯಲ್ಲಿ ನೀಡಲಾಗಿದೆ.

- ನನ್ನ ರೋಲ್ ಸಂಖ್ಯೆ ............
- ಆ ಸಂಖ್ಯೆಯ ಹೆಸರು ............ ಅಕ್ಷರಗಳನ್ನು ಹೊಂದಿದೆ.

ಆ. ನಿಮ್ಮ ನೋಟ್‌ಬುಕ್‌ನಲ್ಲಿ ಕೆಲವು ಸಂಖ್ಯೆಗಳು ಮತ್ತು ಅವುಗಳ ಸಂಖ್ಯೆಯ ಹೆಸರುಗಳನ್ನು ಬರೆಯಿರಿ. ಪ್ರತಿಯೊಂದೂ ಎಷ್ಟು ಅಕ್ಷರಗಳನ್ನು ಹೊಂದಿವೆ?

## ನಾವು ಆಲೋಚಿಸೋಣ



ತೇಜಿ ಮತ್ತು ಜೋಜೊ ೫೬ (ಐವತ್ತಾರು) ಸಂಖ್ಯೆಯನ್ನು ಗಳಿಸಿದರು. ಇದು ೮ ಅಕ್ಷರಗಳನ್ನು ಹೊಂದಿದೆ. ೮ ಅಕ್ಷರಗಳನ್ನು ಹೊಂದಿರುವ ೧ ಮತ್ತು ೯೯ ರ ನಡುವಿನ ಇತರ ಸಂಖ್ಯೆಗಳನ್ನು ಬರೆಯಿರಿ.



ಐವತ್ತು ಆರು

| | | | |
|---|---|---|---|
| ನಲವತ್ತೆರಡು | | | |
| | | | |
| | | | |



**ಶಿಕ್ಷಕರಿಗೆ ಟಿಪ್ಪಣಿ:** ಮಕ್ಕಳು ತಮ್ಮ ಸಂಖ್ಯೆಯ ಹೆಸರುಗಳಲ್ಲಿ ಒಂದೇ ಸಂಖ್ಯೆಯ ಅಕ್ಷರಗಳನ್ನು ಹೊಂದಿರುವ ಸಂಖ್ಯೆಗಳಲ್ಲಿ ಸಾಮಾನ್ಯವಾದದ್ದನ್ನು ಗಮನಿಸಲಿ.

© NCERT not to be republished



## ನಾವು ಮಾಡೋಣ

೧. ೧ ಮತ್ತು ೯೯ ರ ನಡುವಿನ ಅತಿ ಉದ್ದವಾದ ಸಂಖ್ಯೆ(ಗಳ) ಹೆಸರು ಬರೆಯಿರಿ.

................................ ................................ ................................

| ಕಂಡು ಹಿಡಿಯಿರಿ. | ಕಂಡು ಹಿಡಿಯಿರಿ. |
|---|---|
| ನನ್ನ ಸಂಖ್ಯೆಯ ಹೆಸರಿನಲ್ಲಿ ಎರಡು ಪದಗಳಿವೆ. ಮೊದಲ ಪದವು ೬ ಅಕ್ಷರಗಳನ್ನು ಹೊಂದಿದೆ ಎರಡನೇ ಪದವು ೫ ಅಕ್ಷರಗಳನ್ನು ಹೊಂದಿದೆ ನಾನು ೧00 ರ ಸಮೀಪದಲ್ಲಿದ್ದೇನೆ. ನಾನು ಯಾರು? ...................................... | ನನ್ನ ಸ್ನೇಹಿತರು ಮತ್ತು ನಾನು ೬೩ ರಿಂದ ೭೮ ರವರೆಗಿನ ಸಂಖ್ಯೆಗಳು. ನನ್ನ ಎಲ್ಲಾ ಸ್ನೇಹಿತರಲ್ಲಿ ನನ್ನ ಸಂಖ್ಯೆಯ ಹೆಸರು ಅತ್ಯಂತ ಚಿಕ್ಕದಾಗಿದೆ. ನಾನು ಯಾರು? ...................................... |

೨. ನಿಮ್ಮ ಸ್ವಂತ ನೋಟಬುಕ್‌ನಲ್ಲಿ ಇದೇ ರೀತಿಯ ಒಗಟುಗಳನ್ನು ಮಾಡಿ ಮತ್ತು ನಿಮ್ಮ ಸಹಪಾಠಿಗಳನ್ನು ಕೇಳಿ.

ಭಾರತದ ಅತಿ ಉದ್ದದ ಹೆಸರು ಹೊಂದಿರುವ ಸ್ಥಳವೆಂದರೆ ಅದು ವೆಂಕಟನರಸಿಂಹರಾಜುವಾರಿಪೇಟ. ಇದು ಆಂಧ್ರಪ್ರದೇಶದಲ್ಲಿ ತಮಿಳುನಾಡಿನ ಗಡಿಯ ಸಮೀಪದಲ್ಲಿದೆ.










ಒಡಿಶಾದ ಇಬ್ ಮತ್ತು ಗುಜರಾತಿನ ಒಡ್ ಭಾರತದಲ್ಲಿ ಚಿಕ್ಕ ಹೆಸರುಗಳನ್ನು ಹೊಂದಿರುವ ಸ್ಥಳಗಳಾಗಿವೆ.

ತೇಜಿ ಮತ್ತು ಜೋಜೊ ಕೆಲವು ಪಿಕ್ಚರ್ ಕಾರ್ಡ್‌ಗಳನ್ನು ಹೊಂದಿದ್ದಾರೆ. ತೇಜಿ ಇವುಗಳನ್ನು ಈ ರೀತಿ ಎರಡು ಗುಂಪುಗಳಾಗಿ ವಿಂಗಡಿಸಿದ್ದಾನೆ:







© NCERT not to be republished

ಅವಳು ಕಾರ್ಡ್‌ಗಳನ್ನು "ಆಹಾರವನ್ನು ಸೇವಿಸುವವರು" ಮತ್ತು "ಆಹಾರವನ್ನು ಸೇವಿಸದವರು" ಎಂಬ ಗುಂಪುಗಳಾಗಿ ವರ್ಗೀಕರಿಸಿದ್ದಾಳೆ. ಜೋಜೋ ಅವೇ ಕಾರ್ಡ್‌ಗಳನ್ನು ವಿಭಿನ್ನವಾಗಿ ಜೋಡಿಸಿದ್ದಾನೆ.







**ಜೋಜೊ ಮಾಡಿದ ಪ್ರತಿಯೊಂದು ಗುಂಪುಗಳಲ್ಲಿ ಸಾಮಾನ್ಯವಾದುದು ಯಾವುದು?**

.................................................................................

ಕೆಳಗೆ ಮನೆಯಲ್ಲಿ ಬಳಕೆಯಾಗುವ ಕೆಲವು ವಸ್ತುಗಳ ಚಿತ್ರಗಳನ್ನು ನೀಡಲಾಗಿದೆ.




ಮೇಲೆ ಕೊಟ್ಟಿರುವ ವಸ್ತುಗಳ ಹೆಸರುಗಳನ್ನು ಕೆಳಗೆ ನೀಡಲಾದ ಎರಡು ಗುಂಪುಗಳಲ್ಲಿ ಬರೆಯಿರಿ.

| ವಿದ್ಯುತ್ ಅಗತ್ಯವಿರುವ ವಸ್ತುಗಳು | ವಿದ್ಯುತ್ ಅಗತ್ಯವಿಲ್ಲದ ವಸ್ತುಗಳು |
| --- | --- |
| | |
| | |
| | |
| | |

© NCERT not to be republished

ಮೇಲೆ ಕೊಟ್ಟಿರುವ ವಸ್ತುಗಳನ್ನು ವಿಭಿನ್ನವಾಗಿ ಗುಂಪು ಮಾಡಿ. ಕೆಳಗೆ ನೀಡಲಾದ ಜಾಗದಲ್ಲಿ ಅವುಗಳನ್ನು ಬರೆಯಿರಿ.



## ನಾವು ಮಾಡೋಣ

### ಕೇಶ/ಕೂದಲು ಶೈಲಿಗಳು

ಮಾಲಾ ಶಾಲೆಗೆ ಹೋಗುತ್ತಿದ್ದಾಳೆ.  ಅಕೆಯ ತಾಯಿ ಅವಳ ಕೂದಲನ್ನು ಬಾಚಿದ್ದಾಳೆ.  ಮಾಲಾ ಎರಡು ಜುಟ್ಟುಗಳನ್ನು ಕಟ್ಟಿದ್ದಾಳೆ.



ನಿಮ್ಮ ತರಗತಿಯಲ್ಲಿರುವ ಮಕ್ಕಳನ್ನು ನೋಡಿ.

ಎಲ್ಲಾ ಮಕ್ಕಳು ತಮ್ಮ ಕೂದಲನ್ನು ವಿಭಿನ್ನ ರೀತಿಯಲ್ಲಿ ಬಾಚಿಕೊಳ್ಳುತ್ತಾರೆ.

ಗಮನಿಸಿ ಮತ್ತು ಬರೆದಿಟ್ಟುಕೊಳ್ಳಿ

| ಕೂದಲು ಶೈಲಿ |  |  |  |  |  |  |
|---|---|---|---|---|---|---|
| ಮಕ್ಕಳ ಸಂಖ್ಯೆ | | | | | | |



**ಶಿಕ್ಷಕರಿಗೆ ಟಿಪ್ಪಣಿ:** ಹೆಚ್ಚಿನ ವಿಷಯಗಳನ್ನು ಸೂಚಿಸಲು ಮತ್ತು ಅವುಗಳನ್ನು ಗುಂಪುಗಳಲ್ಲಿ ಇರಿಸಲು ಮಕ್ಕಳಿಗೆ ಹೇಳಿ. ಸೂಕ್ತವಾಗಿ. ಇತರ ಸಂಭಾವ್ಯ ಗುಂಪು ಮಾಡುವ ವಿಧಾನಗಳಿವೆಯೇ ಎಂದು ಚರ್ಚಿಸಿ. ಪ್ರತಿಯೊಂದು ವಸ್ತುವೂ ಒಂದು ಅಥವಾ ಇನ್ನೊಂದು ಗುಂಪಿಗೆ ಸೇರಿರಬೇಕಾದ ವಿವಿಧ ವಿಧಾನಗಳ ಗುಂಪನ್ನು ಉತ್ತೇಜಿಸಿ.

© NCERT not to be republished